

ಕಾವ್ಯ ನಲಿವುಗಳ ಚಿಲುಮೆಯಾಗಿ, ಜೀವನ್ಮುಖಿ ಸೆಲೆಯಾಗಿ, ನಿರಂತರ ಚಲನೆಯಾಗಿ, ವಸಂತ, ಗ್ರೀಷ್ಮ, ವರ್ಷ, ಶರತ್, ಹೇಮಂತ, ಶಿಶಿರಗಳಾಗಿ ಕೆಲವೊಮ್ಮೆ ಬಣ್ಣವಾಗಿ, ಕೆಲವೊಮ್ಮೆ ಗಂಧವಾಗಿ, ಮತ್ತೆ ಕೆಲವೊಮ್ಮೆ ಅನುಭವವಾಗಿ ಬದಲಾಗುತ್ತ ನಿತ್ಯನೂತನವಾಗಿಯೇ ಇದೆ. ಕಳೆದ ವರ್ಷ ಇಷ್ಟೊತ್ತಿಗೆ ಇಷ್ಟು ಚಳಿ, ಅದಕ್ಕೂ ಹಿಂದಿನ ವರ್ಷ ಈ ಸಮಯಕ್ಕೆ ಅಷ್ಟು ಮಳೆ, ಮತ್ತೆ ಯಾವಾಗಲೋ ಶ್ವೇತಪುಷ್ಪದ ಧಾರೆಯಾಗಿ ಇಳಿದ ಹಿಮಪಾತ ಮತ್ತೆಷ್ಟೋ ಎಂದು ವರ್ಷದಿಂದ ವರ್ಷಕ್ಕೆ ಕಾಲದಲ್ಲಿ ಆದ ಬದಲಾವಣೆಗಳನ್ನು ಜೀವನನುಭವವನ್ನು ಹರಿತಗೊಳಿಸಿ ಕೆಲವರು ಮಾತನಾಡಬಹುದಾದರೂ, ಅವೆಲ್ಲವೂ ಆ ಆ ಕಾಲಕ್ಕೆ ಸರಿಸುಮಾರು ಹಾಗೆ ಹಾಗೆ ಎಂದು ನಮ್ಮ ಅರಿವನ್ನು ಅಳತೆಯನ್ನೂ ಮೀರಿದ ಕಾಲಯಂತ್ರವೋ ಸಮಯಪಾಲಕನೋ ಹೇಳಬಹುದು. ಆದರೆ ಸರಿಸುಮಾರು ಹಾಗೆ ಹಾಗೆ